

# ಸ್ವರ ಮಾಂತ್ರಿಕ ಮದಿರೆ ಮರಿಸ್ವಾಮಿ

**ರಂಗಭೂಮಿಯ ಕಡುಮೋಹಿಯಾಗಿರುವ ಮದಿರೆ ಮರಿಸ್ವಾಮಿಯವರು ಸಂಗೀತ ಕೈಂಕರ್ಯದಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಮನೆಮಾತಾಗಿರುವವರು. ಜುಗಲಬಂದಿಗೆ ಹೇಳಿ ಮಾಡಿಸಿದ ಹೆಸರು ಇವರದ್ದು.**

■ ದಸ್ತಗೀರಸಾಬ್ ದಿನ್ನಿ

ಒಂದೇ ಬೆರಳು, ಮೊಣಕೈಯಿಂದ ಹಾರ್ಮೋನಿಯಂ ವಾದ್ಯವನ್ನು ವಿಭಿನ್ನ ನಾವೀನ್ಯದೊಂದಿಗೆ ಶ್ರುತಿ ತಪ್ಪದಂತೆ ನುಡಿಸುತ್ತ ಆಶ್ಚರ್ಯ ಹುಟ್ಟಿಸುವ ಅಪ್ರತಿಮ ಕಲಾವಿದ ಮದಿರೆ ಮರಿಸ್ವಾಮಿ.

ವಾದ್ಯವನ್ನು ತಲೆ ಮೇಲೆ, ಹೊಟ್ಟೆ ಮೇಲೆ, ಕೆಳಮುಖವಾಗಿ ಇಟ್ಟು ನಾದ ಹೊಮ್ಮಿಸುವ ಅವರ ಕೈಚಳಕ ಎಂಥವರನ್ನೂ ಮೋಡಿ ಮಾಡುವಂತಿದೆ. ಸಂಗೀತ ಜುಗಲಬಂದಿ ಮತ್ತು ಪೌರಾಣಿಕ ನಾಟಕದ ನೂರಾರು ರಂಗಗೀತೆಗಳಿಗೆ ಸ್ವರ ಸಂಯೋಜಿಸುವ ಪರಿಣತಿ ಇವರಿಗೆ ಕರತಲಾಮಲಕ.

ಬಳ್ಳಾರಿ ಗಡಿನಾಡು ಆದವಾನಿ ತಾಲೂಕಿನ ಮದಿರೆ ಗ್ರಾಮದಲ್ಲಿ 1940ರಲ್ಲಿ ವೀರಯ್ಯ ಮತ್ತು ನೀಲಮ್ಮನವರ ಮಗನಾಗಿ ಜನಿಸಿದರು ಮರಿಸ್ವಾಮಿ. ತಾತ ಮತ್ತು ತಂದೆ ಬಯಲಾಟದ ಪಿಟೀಲು ಸಹವಾದಕರಾಗಿದ್ದರು. 7ನೇ ವಯಸ್ಸಿನಲ್ಲಿ ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮ ಸೇರಿ ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾಗಿ ಸಂಗೀತಾಭ್ಯಾಸ ಮಾಡಿದರು. 'ಒಮ್ಮೆ ನಾನು ಹಾಡುವುದನ್ನು ಗಮನಿಸಿದ ಗುರುಗಳು – ನಿನ್ನ ಕಂಠ ಸರಿಯಾಗಿಲ್ಲ, ಹಾರ್ಮೋನಿಯಂನಲ್ಲೇ ಸಾಧನೆ ಮಾಡು' ಎಂದು ಹೇಳಿ ತಿದ್ದಿ ತೀಡಿದ ಬಗೆಗೆ ಮನದುಂಬಿ ನೆನಪಿಸಿಕೊಳ್ಳುವಾಗ ಅವರ ಕಣ್ಣುಗಳು ಒದ್ದೆಯಾಗುತ್ತವೆ.

ಮನೆಯ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿತ್ತು. ಬದುಕಿನ ನೊಗಕ್ಕೆ ಹೆಗಲು ಕೊಡಬೇಕಾದ ಅನಿವಾರ್ಯತೆ. 6 ವರ್ಷಗಳ ನಂತರ ಗುರುಗಳ ನಾಟಕ ಕಂಪನಿಯಲ್ಲಿ ಹಾರ್ಮೋನಿಯಂ ವಾದಕರಾಗಿ ರಂಗಭೂಮಿ ಪ್ರವೇಶಿಸಿದರು. ಆಗ ಪಡೆಯುತ್ತಿದ್ದ ವಾರದ ಸಂಭಾವನೆ ಕೇವಲ ಒಂದು ರೂಪಾಯಿ. ಸಿಕ್ಕ ಬಿಡಿಗಾಸಿನಲ್ಲೇ ಬದುಕನ್ನು ಕಟ್ಟಿಕೊಂಡವರು.

ಪಂ. ಸೋಮನಾಥ ಮರಡೂರು ಅವರಿಂದ ವಾದನದ ಒಳಸುಳಿವುಗಳನ್ನು ಕಲಿತು ತಜ್ಞ ವಾದಕರಾಗಿ ರೂಪುಗೊಂಡರು. ಅಕ್ಷರ ಕಲಿಯಲು ಶಾಲೆಗೆ ಹೋದವರಲ್ಲ. ರಂಗಭೂಮಿ ಶಾಲೆಯಲ್ಲೇ ಬದುಕಿನ ಪಾಠಗಳನ್ನು ಕಲಿತವರು. ಸುಳ್ಳದ ದೇಸಾಯಿ, ಯಮನೂರು ಬಾಳಪ್ಪ, ನರೇಗಲ್, ಗುಡಿಗೇರಿ, ಬಿಜಾಪುರದ ನಾಟಕ ಕಂಪನಿಗಳಲ್ಲಿ ಸೇವೆ ಸಲ್ಲಿಸಿದರು. ಹುಟ್ಟೂರಿನ ಮೋಹ ಕೈಬೀಸಿ ಕರೆದಿದ್ದರಿಂದ ಮದಿರೆಗೆ ಬಂದು ಗ್ರಾಮೀಣ ರಂಗಭೂಮಿಯ ನಾಟಕಗಳನ್ನು ನಿರ್ದೇಶಿಸಿದರು.

ಕಂಪ್ಲಿ ವಾದಿರಾಜ, ಸಿರಿಗೆರೆ ನಾಗನಗೌಡ, ಗೌಸ್ ಮತ್ತು ಮದಿರೆ ಮರಿಸ್ವಾಮಿಗಳೆಂದರೆ ರಂಗಮಂಟಪದ ನಾಲ್ಕು ಕಂಬಗಳೆಂದೇ ಪ್ರತೀತಿ. ವಿಶೇಷವಾಗಿ ಮದಿರೆ ಮರಿಸ್ವಾಮಿಯವರದು ಜುಗಲಬಂದಿಗೆ ಹೇಳಿ ಮಾಡಿಸಿದ ಹೆಸರು. ಸಿರಿಗೆರೆ ನಾಗನಗೌಡರೊಂದಿಗೆ ಹಾರ್ಮೋನಿಯಂ ಜುಗಲಬಂದಿ, ವೀರೇಶ್ ಮದಿರೆ ಪಿಟೀಲು, ಹೊಸಪೇಟೆ ವೆಂಕನಗೌಡ ಗಿಟಾರ್, ನರಸಿಂಹಲು ವಡವಾಟಿ ಕ್ಲಾರಿಯೊನೆಟ್, ದಿಲ್‌ರುಬಾ, ಸಿತಾರ್, ಕೊಳಲು ಹೀಗೆ ಅನೇಕ ವಾದನಗಳ ಜೊತೆ ನಡೆಸಿದ ಜುಗಲಬಂದಿ ಸಂಗೀತಪ್ರಿಯರಿಗೆ ಮಧುರಾನುಭವ ನೀಡಿದ್ದು ಈಗ ಇತಿಹಾಸ.

ದೆಹಲಿ, ಬಾಂಬೆ, ಮದ್ರಾಸ್, ಗೋವಾ, ಕೇರಳ ಮುಂತಾದ ಕಡೆ ಜುಗಲಬಂದಿ ನೀಡಿದ ಮದಿರೆ ಹಿರಿಯ ಕಲಾವಿದರಾದ ಭೀಮಸೇನ ಜೋಷಿ, ಬಸವರಾಜ ರಾಜಗುರು, ಪಂಚಾಕ್ಷರಯ್ಯ ಮತ್ತಿಗಟ್ಟಿ ಅವರಿಗೆ ಹಾರ್ಮೋನಿಯಂ ಸಾಥ್ ನೀಡಿದ್ದಾರೆ. ಕಲಾವಿದರಾದ ಪ್ರಮೀಳಾ ಗುಡೂರು, ವನಮಾಲಾ, ಭವಾನಿ, ಸುಭದ್ರಮ್ಮ ಮನ್ನೂರು, ರಂಗವೇಣಿ, ಅದೋನಿ ಲಕ್ಷ್ಮಿ, ಎಲಿವಾಳ ಸಿದ್ದಯ್ಯಸ್ವಾಮಿ, ಶಂಕ್ರಯ್ಯ ಮುಂತಾದವರಿಗೆ ಅಮೋಘ ಪರಿಣತಿಯಿಂದ ಹಾರ್ಮೋನಿಯಂ ಕಲಿಸಿದವರು.

ರಂಗಭೂಮಿಯ ಸೇವೆ ತೃಪ್ತಿ ಕೊಟ್ಟಿದೆ ಎನ್ನುವ ಶಾರದೆಯ ಈ ಆರಾಧಕ ಬಳ್ಳಾರಿಯ ಹಳ್ಳಿಯೊಂದರಲ್ಲಿ ನಡೆದ ನಾಟಕಕ್ಕೆ ಹಿನ್ನೆಲೆ ಸಂಗೀತ ಒದಗಿಸಲು ಹೋದಾಗ ಕಲಾವಿದೆಯರಿಗಷ್ಟೇ ಸಂಭಾವನೆ ಕೊಟ್ಟು ತನ್ನನ್ನು ಬರಿಗೈಯಿಂದ ವಾಪಸ್ ಕಳಿಸಿದ ಕಹಿ ಅನುಭವವನ್ನು ಮರೆತಿಲ್ಲ.

ಅವರದು ಆರ್ಥಿಕ ಚೈತನ್ಯವಿಲ್ಲದ ಕುಟುಂಬ. ನರಗಳ ದೌರ್ಬಲ್ಯದಿಂದ ಬಳಲುತ್ತಿದ್ದಾರೆ. ಆದರೂ ಸಂಗೀತಾರ್ಚನೆ, ನಾದೋಪಾಸನೆ, ರಂಗಭೂಮಿ ಬಗೆಗಿನ ಪ್ರೀತಿ, ಬದ್ಧತೆ, ಜೀವನೋತ್ಸಾಹ ಮಾತ್ರ ಕುಗ್ಗಿಲ್ಲ. ಮಗು ಮನಸ್ಸಿನ ದೇಸೀತನದ ಗಟ್ಟಿ ಪ್ರತಿಭೆ ಮದಿರೆಯವರು 85ರ ಈ ಇಳಿ ವಯಸ್ಸಿನಲ್ಲೂ ತಾಸಿಗೊಂದು ರಾಗದಂತೆ 24 ತಾಸು ನಿರಂತರವಾಗಿ ಹಾರ್ಮೋನಿಯಂ ನುಡಿಸುವ ಬಹು ದಿನದ ಕನಸನ್ನು ಬಿಚ್ಚಿಡುತ್ತಾರೆ. ಕನಸು ನನಸಾಗುವ ಗಳಿಗೆಗಾಗಿ ಚಾತಕಪಕ್ಷಿಯಂತೆ ಹಂಬಲಿಸುವ ಮದಿರೆಯವರು ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ಬೆಳಗಿದ್ದಾರೆ.

ಇವರ ರಂಗಭೂಮಿ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಗುಬ್ಬಿ ವೀರಣ್ಣ ಪ್ರಶಸ್ತಿಗಳು ಸಂದಿವೆ. ಕೊಟ್ಟೂರಿನಲ್ಲಿ ಈಚೆಗೆ ಹವ್ಯಾಸಿ ರಂಗಭೂಮಿ ಕಲಾವಿದರು ಸೇರಿ 'ಕಂದಗಲ್ ಹನುಮಂತರಾಯ' ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in